ಮೂಲಕ್ಕೆ ಗ್ರಾಮಸ್ಥರು ವಿದ್ಯುತ್ ಸಂಪರ್ಕಕ್ಕೆ ಅವಕಾಶ ನೀಡಿರುವುದಿಲ್ಲಾ ಮತ್ತು ಹೊಸ ಜಲಮೂಲಕ್ಕಾಗಿ ಒತ್ತಾಯಿಸುತ್ತಿದ್ದರು. ಗ್ರಾಮದಲ್ಲಿ ಮತ್ತೊಂದು ಕೊಳವೆಬಾವಿಯನ್ನು ಈಗ ಕೊರೆಯಲಾಗಿದೆ. ಹೊಸ ಕೊಳವೆಬಾವಿಗೆ ಹೊಸ ಕೈಪಂಪನ್ನು ಅಳವಡಿಸುವ ಬಗ್ಗೆ ಮತ್ತು ಯೋಜಿತ ಹೆಚ್ಚುವರಿ ಇಳುವರಿ ಕೈಪಂಪು ಇರುವ ಕೊಳವೆಬಾವಿಗೆ ಮೋಟಾರ್ ಅಳವಡಿಸುವುದಕ್ಕೆ ಗ್ರಾಮಸ್ಥರ ಮನವೊಲಿಸಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಇ) ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುತ್ತದೆಂಬುದಕ್ಕೆ ಯಾವುದೇ ವರದಿ ಇದುವರೆಗೂ ಬಂದಿರುವುದಿಲ್ಲ.

ಈ) ಯೋಜನೆಯಡಿ ಪರ್ಯಾಯ ವ್ಯವಸ್ಥೆಗೆ ಪ್ರಸ್ತಾಪ ಮಾಡಿರುವುದಿಲ್ಲ.

ಪಿರಿಯಾಪಟ್ಟಣ ತ್ಲಾಲೂಕಿನ ಗ್ರಾಮ ಪಂಚಾಯ್ತಿಯಲ್ಲಿ ಜಮಾಬಂದಿ ಕಾರ್ಯ ಪ್ರಗತಿ

2509 (3010) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೨೦೦೦-೦೧ ಹಾಗೂ ೨೦೦೧-೦೨ನೇ ಸಾಲಿನಲ್ಲಿ ಪಿರಿಯಾಪಟ್ಟಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ೫ ಹೋಬಳಿಗಳಲ್ಲಿನ ಗ್ರಾಮ ಪಂಚಾಯ್ತಿಗಳಲ್ಲಿ ಜಮಾಬಂದಿ ಕೆಲಸವನ್ನು ಮಾಡಲಾಗಿದಯೇ;

ಆ. ಹಾಗಿದಲ್ಲಿ ತಪಾಸಣಾ ಸಮಯದಲ್ಲಿ ಹಣ ದುರುಪಯೋಗ ಪ್ರಕರಣವನ್ನು ಗುರುತಿಸಲಾಗಿದಯೇ?

ಇ. ಹಾಗಿದ್ದಲ್ಲಿ ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? (ಹೋಬಳಿವಾರು ವಿವರವನ್ನು ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಿಸಿದಂತೆ ವಿವರ ನೀಡುವುದು)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ. ೨೦೦೦-೦೧ನೇ ಸಾಲಿನ ಜಮಾಬಂದಿಯನ್ನು ನಡೆಸಲಾಗಿದೆ.

೨೦೦೧-೦೨ನೇ ಸಾಲಿನ ಜಮಾಬಂದಿಯನ್ನು ಈ ಆರ್ಥಿಕ ವರ್ಷದಲ್ಲಿ ಮಾರ್ಗಸೂಚಿಯಂತೆ ನಡೆಸಲಾಗುವುದು.

ಆ. ಯಾವುದೇ ಹಣ ದುರುಪಯೋಗ ಪ್ರಕರಣ ಕಂಡು ಬರುವುದಿಲ್ಲ.

ಇ. ಉದ್ಭವಿಸುವುದಿಲ್ಲ.